ಅ) ವೈದ್ಯರ ಹುದ್ದೆ ಮಂಜೂರಾಗಿರುವುದಿಲ್ಲ, ಪಕ್ಕದ ಪ್ರಾಥಮಿಕ ಆರೋಗ್ಯ ಕೇಂದ್ರ ದೇಶನೂರು ಇಲ್ಲಿನ ವೈದ್ಯಾಧಿಕಾರಿಗಳು ದಿನ ಬಿಟ್ಟು ದಿನ ಹಾಜರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಒಂದು ತಿಂಗಳಿಂದ, ರಜೆ ಮೀಸಲು ಹುದ್ದೆಯ ವೈದ್ಯರನ್ನು ಓ.ಪಿ.ಡಿ. ಮೇಲೆ ಬೆಳಗಾಂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ನೇಮಕ ಮಾಡಿರುತ್ತಾರೆ.

ಈ ಆಸ್ಪತ್ರೆಯಲ್ಲಿ ಒಬ್ಬ ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಒಬ್ಬ ಗುಮಾಸ್ತ ಹಾಗೂ ಇಬ್ಬರು 'ಡಿ' ದರ್ಜೆ ನೌಕರರು ಕೆಲಸ ಮಾಡುತ್ತಿದ್ದಾರೆ.

ಆ) ಹೌದು, ಮಹಿಳಾ ವೈದ್ಯರ ಹುದ್ದೆ ಮಂಜೂರಾಗಿರುವುದಿಲ್ಲ.

ಇ) ಇಲ್ಲ

ಈ) ಬಂದಿದೆ

ಉ) ಜಿಲ್ಲಾ ಪರಿಷತ್ತಿನಿಂದ ಪ್ರಸ್ತಾವನೆಗಳು ಬಂದ ನಂತರ ಮಹಿಳಾ ವೈದ್ಯಾಧಿಕಾರಿಯ ಹುದ್ದೆಯನ್ನು ಸೃಷ್ಟಿಸಲು ಕ್ರಮ ಕೈಗೊಳ್ಳಲಾಗುವುದು.

ಬೆಳಗಾಂ ಜಿಲ್ಲಾ ಕೈಗಾರಿಕಾ ಕೇಂದ್ರದವರು ಮಂಜೂರು ಮಾಡಿದ ಪ್ರೋತ್ಸಾಹ ಹಾಗೂ ರಿಯಾಯತಿಗಳನ್ನು ಕೂಡಲೆ ಮಂಜೂರು ಮಾಡುವ ಬಗ್ಗೆ

847. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೆಳಗಾಂ ಜಿಲ್ಲೆಯಲ್ಲಿ ಸ್ಥಾಪಿತವಾದ ಕೈಗಾರಿಕೆಗಳಿಗೆ (ಸಣ್ಣ ಕೈಗಾರಿಕೆಗಳಿಗೆ) ಜಿಲ್ಲಾ ಕೈಗಾರಿಕಾ ಕೇಂದ್ರದವರಿಂದ ಸರ್ಕಾರದ ಸಹಾಯಧನ ಪ್ರೋತ್ಸಾಹ ಹಾಗೂ ರಿಯಾಯಿತಿ ಕೊಡುವ ಹಣ ಇಲ್ಲಿಯವರೆಗೂ ಎಷ್ಟು ಬಾಕಿ ಇರುವುದು, ಯಾವ ಯಾವ ಕೈಗಾರಿಕೆಗಳಿಗೆ ಎಷ್ಟು ಎಷ್ಟು ಹಣವನ್ನು ಕೊಡಬೇಕಾಗಿರುವುದು (ಪೂರ್ಣ ಕೈಗಾರಿಕಾ ವಿವರಗಳನ್ನು ಕೊಡುವುದು) ;

ಆ) ದಿನಾಂಕ 28–9–89 ರಂದು ನಡೆದ ಸರ್ಕಾರದ ಸಹಾಯಧನ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ಮಂಜೂರು ಮಾಡಲಾಗಿದ್ದು ಜಿಲ್ಲಾ ಮಟ್ಟದ ಸಮಿತಿಯಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಎಷ್ಟೆಷ್ಟು ರಿಯಾಯಿತಿ ಹಣವನ್ನು ಕೊಡಬೇಕೆಂದು ಠರಾಯಿಸಲಾಯಿತು.? (ಆ ಕಾರ್ಖಾನೆಗಳ ಹೆಸರುಗಳನ್ನು ನೀಡಬೇಕು ಮತ್ತು ಅವುಗಳ ಮೊತ್ತವನ್ನು ಸಹ ತಿಳಿಸುವುದು);

ಇ) ದಿನಾಂಕ 28–9–89 ರಂದು ನಡೆದ ಸಭೆಯ ನಡವಳಿಕೆಯ ಪ್ರಕಾರ ಉದ್ದಿಮೆದಾರರಿಗೆ ಪ್ರೋತ್ಸಾಹ ಹಣವನ್ನು ಎಂದು ಬಿಡುಗಡೆ ಮಾಡಲಾಯಿತು ಒಂದು ವೇಳೆ ಬಿಡುಗಡೆ ಮಾಡದೇ ಇದ್ದಲ್ಲಿ ಎಂದಿನಿಂದ ಬಿಡುಗಡೆ ಮಾಡಲಾಗುವುದು;

ಈ) ರಾಜ್ಯದಲ್ಲಿ ಪ್ರೋತ್ಸಾಹ ಹಣವನ್ನು ಬಿಡುಗಡೆ ಮಾಡುವಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ತಾರತಮ್ಯ ಮಾಡಲಾಗುತ್ತಿದೆ ಎಂಬ ಸಂಗತಿ ನಿಜವೆ ಮತ್ತು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ (ಸಂಪೂರ್ಣ ವಿವರವನ್ನು ತಿಳಿಸುವುದು) ;

ಉ) ಈ ಪ್ರೋತ್ಸಾಹ ಹಣವನ್ನು ಬಿಡುಗಡೆ ಮಾಡುವಲ್ಲಿ ತುಂಬ ವಿಳಂಬವಾಗುತ್ತಿದೆ ಎಂಬ ಸಂಗತಿ ನಿಜವೆ ; ಹಾಗಾದರೆ ಮುಂದೆಯಾದರೂ ವಿಳಂಬವಾಗದ ಹಾಗೆ ಕ್ರಮ ಕೈಗೊಳ್ಳುವಿರಾ ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು) –

ಅ) ಬೆಳಗಾಂ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಕೈಗಾರಿಕೆಗಳಿಗೆ ರೂ.2,22,84,740–00 ಗಳ ರಾಜ್ಯ ಸಹಾಯಧನ ಪ್ರೋತ್ಸಾಹ ರಿಯಾಯಿತಿಗಳ ಬಾಕಿ ಇರುತ್ತದೆ. (ವಿವರಗಳ ಪಟ್ಟಿ – I ಲಗತ್ತಿಸಲಾಗಿದೆ).

ಆ) ದಿನಾಂಕ 28–9–89 ರಂದು ನಡೆದ ಜಿಲ್ಲಾ ಮಟ್ಟದ ಸಭೆಯಲ್ಲಿ ರೂ.8,49,350–00 ಪ್ರೋತ್ಸಾಹ ಸಹಾಯಧನ ರಿಯಾಯಿತಿಗಳನ್ನು 11 ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದ್ದು, ವಿವರಗಳ ಪಟ್ಟಿ -II ಲಗತ್ತಿಸಲಾಗಿದೆ.

ಇ) ದಿನಾಂಕ 28–9–89 ರ ಜಿಲ್ಲಾ ಮಟ್ಟದ ಸಭೆಯಲ್ಲಿ ಮಂಜೂರಾದ ಉದ್ದಿಮೆದಾರರಿಗೆ ಪೂರ್ತಿಯಾಗಿ ಪ್ರೋತ್ಸಾಹ ಸಹಾಯ ಧನವನ್ನು ಡಿಸೆಂಬರ್ 1991ರಲ್ಲಿ ಬಿಡುಗಡೆ ಮಾಡಲಾಯಿತು.

ಈ) ರಾಜ್ಯ ಸಹಾಯ ಧನದ ಬಿಡುಗಡೆಯು ಆ ಜಿಲ್ಲೆಯಲ್ಲಿ ಮಂಜೂರಾಗಿ ಬಾಕಿ ಉಳಿದಿರುವ ಸಹಾಯ ಧನದ ಮೊತ್ತವನ್ನು ಆಧಾರಿಸಿರುತ್ತದೆ. 1991–92ನೇ ಸಾಲಿನಲ್ಲಿ ರೂ.850–00 ಲಕ್ಷಗಳ ಸಹಾಯ ಧನವನ್ನು ರಾಜ್ಯ ವಿವಿಧ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. (ವಿವರ - III ಪಟ್ಟಿಯಲ್ಲಿ ಲಗತ್ತಿಸಲಾಗಿದೆ)

ಉ) ಪ್ರತಿ ವರ್ಷವು ಸುಮಾರು 10.00 ಕೋಟಿ ರೂ. ಗಳಿಂದ 12.00 ಕೋಟಿ ರೂ.ಗಳ ಸಹಾಯ ಧನವನ್ನು ರಾಜ್ಯದ ವಿವಿಧ ಕೈಗಾರಿಕೆಗಳಿಗೆ ಮಂಜೂರು ಮಾಡುತ್ತಿದ್ದು, ಈ ಹಿಂದಿನ ವರ್ಷಗಳಲ್ಲಿ ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸದೆ ಇದ್ದ ಕಾರಣ ಹಣವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. 1991 – 92ನೇ ಸಾಲಿನ ಆಯವ್ಯಯದಲ್ಲಿ ರೂ.13..50 ಕೋಟಿ ಒದಗಿಸಿದ್ದು ಈ ಹಣವನ್ನು ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆ.

III. Statement showing the State Subsidy releasedd to the District during 1991–92 . (SSI Units)

Sl. No.	Name of the District	Amount released		Remarks to clear the backlog up to end of.
1.	Bangalore (Rural)	62.19	89 –90	December 1989
2.	Bangalore (Urban)	191.20	89 –90	March 1990
3.	Belgaum	60.64	89 –90	December 1989
4.	Bellary	21.97	89 –90	March 1990
5.	Bidar	3.00	90 –91	March 1991
6.	Bijapur	2.00	90 –91	March 1991
7.	Chickmagalur	3.50	90 –91	March 1991
8.	Chitradurga	55.17	90 –91	June 1990
9.	Dharwar	15.00	90 –91	March 1991
10.	Mangalore (D.K.)	83.19	89 –90	September 1989
11.	Gulbarga	47.74	90 –91	March 1991
12.	Kodagu	2.00	90 –91	March 1991
13.	Kolar	61.45	90 –91	September 1990
14.	Hassan	5.47	90 –91	March 1991
15.	Mandya	36.35	90 –91	September 1990
16.	Mysore	82.59	89 –90	March 1990
17.	Raichur	3.22	90 –91	March 1991
18.	Shimoga	57.22	89 –90	March 1990
19.	Tumkur	47.00	90 –91	June 1990
20.	Karkwar (U.K. Dist)	9.10	90 –91	March 1991
	Total	850.00		

I. Statement showing the State Subsidy to be released in Belgaum District.

Sl. No.	Year	No. of Units	Amount
1.	1988–89	43	4,25,000–00
2.	1989–90	168	47,79,045–00
3.	1990–91	100	78,13,425–00
4.	1991–92	106	92,47,270–00
	Total	417	2,22,84,740–00

II. Statement showing the Number of cases sanctioned State Subsidy in the DLC held on 28.9.1989 in Belgaum District.

Sl. No.	Name of the Unit and Address.	Amount	Remarks
1.	P–4, Food Products, Khanapur	1,27,900–00	
2.	Deshnur Ginning Pressing Factory, Bailhongal.	4,64,600–00	
3.	Patil Ankali & co. Kadaklat	75,000–00	
4.	A.M. Kaval & Co. Akkola	75,000–00	Released
5.	J.K. Manavi & Sons, Nippani	75,000–00	the State
6.	Kapur Industries, Athani	2,550–00	Subsidy
7.	Bhagavan Tabacoo, Athani	2,400–00	full during
8.	Mahadev Shambu Enterprises, Belgaum.	8,370–00	December.
9.	Yuvaraj Enterprises, Nippani	12,600–00	1991 to
10.	Shivaganga Soda Factory, Bailhongal.	3,630–00	these
11.	Ramalingeshwar Flour Mill, Hulkunda	2,300–00	Units.
		8,49,350–00	